**ಪಿ ಡಬ್ಲೂ : 1**

ಸಾಕ್ಷಿಗೆ ದಿನಾಂಕಃ **24.07.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 3ನೇ ಎದುರುದಾರರರ ಪರಃ ಶ್ರೀ ಕೆ.ಪಿ.ಕೆ. ವಕೀಲರಿಂದ:</u>**

ಮುತ್ತತ್ತಿಗೆ ನಮ್ಮ ಮನೆಯಿಂದ ಹೋಗುತ್ತಿರುವಾಗ ಅಪಘಾತವಾಗಿರುತ್ತದೆ. ಅಪಘಾತಪಡಿಸಿರುತ್ತದೆ ಎಂದು ಹೇಳುವ ಕಾರಿನ ಚಾಲಕ ನನಗೆ ಪರಿಚಿತರು ಎಂದರೆ ಸರಿಯಲ್ಲ. ನಾನು ಅಡ್ಡದಿಡ್ಡಿಯಾಗಿ ರಸ್ತೆಯಲ್ಲಿ ಹೋಗುವ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನಗೆ ಪರಿಚಯಸ್ಥರು ಉಪಚರಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವಾದಾಗ ನನಗೆ ಸ್ವಲ್ಪ ಪ್ರಜ್ಞೆ ಇತ್ತು. ಮಳವಳ್ಳಿ ಅಸ್ಪತ್ರೆಯಲ್ಲಿ ನನಗೆ ಪೂರ್ಣವಾಗಿ ಪ್ರಜ್ಞೆ ಬಂದಿತ್ತು. ಅಪಘಾತ ಯಾವ ರೀತಿ ಅಯಿತ್ತು ಎಂದು ನಾನು ಮಳವಳ್ಳಿ ಅಸ್ಪತ್ರೆಯಲ್ಲಿ ಹೇಳಿ ಬರೆಸಿರುತ್ತೇನೆ. ಮಂಡ್ಯ ಅಸ್ಪತ್ರೆಯಲ್ಲಿ ಶಸ್ತ್ರ ಬಲಗಾಲಿಗೆ ಚಿಕಿತ್ಸೆ ಅಗಿರುತ್ತದೆ. ನಾನು ಮಂಡ್ಯ ಅಸ್ಪತ್ರೆಯಲ್ಲಿ ಹಲವಾರು ದಿನ ಒಳರೋಗಿಯಾಗಿ ದಾಖಲಾಗಿದ್ದೆ. ದಿನಾಂಕ 26.08.2023 ರಿಂದ 17.09.2023 ರವರೆಗೆ ಒಳರೋಗಿಯಾಗಿ ದಾಖಲಾಗಿದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮಂಡ್ಯದ ಮಹೇಂದ್ರ ವೈದ್ಯರು ನನಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ನಾನು ಕೊನೆಯ ಬಾರಿಗೆ ಎರಡು ವರುಷದ ಹಿಂದೆ ವೈದ್ಯರ ಬಳಿ ಚಿಕಿತ್ಸೆಗೆ ಹೋಗಿದ್ದೆ. ಸದರಿ ಕಾಲಕ್ಕೆ ನನ್ನ ಕಾಲಿನ ಕ್ಷ ಕಿರಣವನ್ನು ಮಾಡಿಸಿರುತ್ತಾರೆ ಎಂದರೆ ಸರಿ. ಗುಣಮುಖವಾಗಿದೆ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಮೂಳೆ ಸಂಪೂರ್ಣವಾಗಿ ಜೋಡಣೆಯಾಗಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2) ನಾನು ಬಿ ಪಿ ಎಲ್ ಪಡಿತರ ಚೀಟಿಯನ್ನು ಹೊಂದಿರುತ್ತೇನೆ ಎಂದರೆ ಸರಿ. ಆ ರೀತಿಯ ಪಡಿತರ ಚೀಟಿ ಇದ್ದಾಗ ಸರ್ಕಾರಿ ಅಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡುತ್ತಾರೆ ಎಂದರೆ ಸರಿ, ಆದರೆ 2 ಲಕ್ಷ ರೂಪಾಯಿ ಖರ್ಚಾಗಿರುತ್ತದೆ. ಅಷ್ಟು ಪ್ರಮಾಣದ ಖರ್ಚು ಅಗದೇ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 62 ವರುಷ ವಯಸ್ಸು ಅಗಿದೆ ಎಂದರೆ ಸರಿಯಲ್ಲ. ನನಗೆ 53 ವರುಷ ವಯಸ್ಸು ಅಗಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು 30 ಸಾವಿರ ರೂಪಾಯಿ ವರಮಾನ ಹೊಂದಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಶಾಶ್ವತ ಅಂಗನ್ಯೂನ್ಯತೆ ಅಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಡ್ಡದಿಡ್ಡಿಯಾಗಿ ಹೋಗಿ ಅಪಘಾತ ಅಗಿದ್ದು, ಕಾರಿನ

ಮಾಲೀಕರ ಜೊತೆ ಸೇರಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಮಲೋಚನೆ ಮಾಡಿ 4 ದಿನಗಳ ವಿಳಂಬವಾಗಿ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಕಾರು ಚಾಲಕನಿಗೆ ಡಿ ಎಲ್ ಇರಲಿಲ್ಲ ಮತ್ತು ಕಾರಿಗೆ ವಿಮೆ ಇಲ್ಲದ ಕಾರಣ 3ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ